## ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿಸಿ ನಂ. 1413/2020

ಫ್ರಾಸಾ : 12
ಚಾಸಾ : 12

| | | |
|---|---|---|
| ಹೆಸರು | : | ಚೇತನ್ |
| ತಂದೆಯ ಹೆಸರು | : | ನೋಣಯ್ಯ |
| ಪ್ರಾಯ | : | 29 ವರ್ಷ |
| ಉದ್ಯೋಗ | : | ಪೇಂಟಿಂಗ್ |
| ವಾಸಸ್ಥಳ | : | ವಿಟ್ಲ ಪಡ್ನೂರು ಗ್ರಾಮ |

---

ದಿಃ 16.05.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

---

### ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ಸಾಕ್ಷಿ ಸಹಿಯನ್ನು ತನ್ನದೆಂದು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ದಿ. 24.07.2020 ರ ಸ್ವತ್ತು ಸ್ವಾಧೀನತಾ ಮಹಜರನ್ನು ನಿಪಿ-14 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು . ಸುಮಾರು ವರ್ಷಗಳ ಹಿಂದೆ ಅದಕ್ಕೆ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ . ಯಾವ ಉದ್ದೇಶಕ್ಕೆ ಸಹಿ ಹಾಕಿರುತ್ತೇನೆಂದು ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಸ್ವತ್ತನ್ನು ಅಮಾನತುಪಡಿಸಿಕೊಂಡು ಯಾವುದೇ ಮಹಜರ ಜರುಗಿಸಿರುವುದಿಲ್ಲ .

(ಈ ಹಂತದಲ್ಲಿ ಮಾನ್ಯ ಎ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

### ಪಾಟೀ ಸವಾಲುಃ ಎಪಿಪಿಯವರಿಂದಃ -

2. ದಿ. 24.07.2020 ರಂದು ಬಂಟವಾಳ ತಾಲೂಕು ಕೊಳ್ನಾಡು ಗ್ರಾಮದ ಕಟ್ಟತ್ತಿಲ ಮಠ ಎಂಬಲ್ಲಿಗೆ ವಿಟ್ಲ ಠಾಣಾ ಪೋಲಿಸ ಉಪನೀರಿಕ್ಷಕರು ತಮಗೆ ಬಂದ ಬಾತ್ಮಿ ಮೇರೆಗೆ ಆರೋಪಿ ಬಶಿರ್ ಪತ್ತೆಯ ಬಗ್ಗೆ ಆತನ ಮನೆ ಬಳಿ ಬಂದಿದ್ದಾಗ ಆತ ಪತ್ತೆಯಾಗದೆ ಇದ್ದು , ಆತನ ಮನೆಯ ಎದುರು ಜಾನುವಾರ ಸಾಗಾಟಕ್ಕೆ ಬಳಸುತ್ತಿದ್ದ ಮಾರುತಿ ಕಾರ್ ಕಂಡು ಬಂದಿದ್ದು , ಸ್ದಳಕ್ಕೆ ನನ್ನನ್ನು ಮತ್ತು ಚಾಸಾ-13 ರವರನ್ನು ಬರಮಾಡಿಕೊಂಡು ವಿಚಾರ ತಿಳಿಸಿ ಕೋರಿಕೊಂಡ ಮೇರೆಗೆ ನಾವು ಪಂಚರಾಗಿ ಒಪ್ಪಿರುತ್ತೇವೆ ಎಂದರೆ ಸರಿಯಲ್ಲ . ಕೆಎ-19-ಎಮಎಫ್-4896 ಮಾರುತಿ ಓಮಿನಿ ಕಾರನ್ನು ಸ್ವಾದೀನಪಡಿಸಿಕೊಂಡು ಸಂಜೆ 6.15 ರಿಂದ 6.45 ರ ವರೆಗೆ ಜರುಗಿಸಿದ ನಿಪಿ-14 ಮಹಜರಿಗೆ ನಾವು ಸ್ದಳದಲ್ಲಿಯೇ ಸಹಿ ಹಾಕಿರುತ್ತೇವೆ ಎಂದರೆ ಸರಿಯಲ್ಲ . ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ವಕೀಲರಿಂದಃಇರುವುದಿಲ್ಲ</u>

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ